ತೆಗೆದುಕೊಂಡು ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಸದನಕ್ಕೆ suo-moto statement ಕೊಡಬೇಕಾಗಿರತಕ್ಕಂಥದ್ದು ನಿಮ್ಮ ಕರ್ತವ್ಯ ಅದರಲ್ಲಿ ವಿಫಲತೆಯಾಗಿದೆ ಎಂದು ನಾನು ಹೇಳಿದೆನೇ ಹೊರತು ನೀವು ಆ ಘಟನೆಗೆ ಹೊಣೆ ಎಂದು ನಾನು ಹೇಳಲಿಲ್ಲ.

ಅಧ್ಯಕ್ಷರು :– ಆಯಿತು ಬಿಡಿ, ಅದೇನೋ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಸಂಬಂಧಪಟ್ಟವರಿಂದ ಇದರ ಬಗ್ಗೆ ಸವಿವರವಾದಂತಹ ಉತ್ತರವನ್ನು ಸದನಕ್ಕೆ ಒದಗಿಸಲಾಗುವುದು.

ವಿಷಯ : ಕೃಷ್ಣಾ ನದಿ ಬತ್ತಿ ಹೋಗಿರುವ ಬಗ್ಗೆ

ಶ್ರೀ ಸಿದ್ದು ಸಾವದಿ (ಜಮಖಂಡಿ) :– ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಜೀವನಾಡಿ ಎಂದು ಹೆಸರಾಗಿರತಕ್ಕಂಥ ಕೃಷ್ಣಾ ನದಿ ಸುಮಾರು 4–6 ವರ್ಷಗಳಿಂದ ಹೆಚ್ಚಾಗಿ 4–6 ತಿಂಗಳವರೆಗೆ ಸಂಪೂರ್ಣ ಬತ್ತಿ ಹೋಗುತ್ತಿದೆ. ಇದರಿಂದ ನನ್ನ ಕ್ಷೇತ್ರದ ಇಡೀ ಜಮಖಂಡಿ ತಾಲ್ಲೂಕಿನ ನೂರಾರು ಹಳ್ಳಿಗಳ ಜೊತೆಗೆ ನಾಲ್ಕಾರು ಪಟ್ಟಣಗಳು ಸೇರಿ ಬೀಳಗಿ ಅಥಣಿ ರಾಯಭಾಗ್ ಚಿಕ್ಕೋಡಿ ಈ 4–5 ತಾಲ್ಲೂಕುಗಳಿಗೆ ಸಂಬಂಧಿಸಿದ ಕೃಷ್ಣಾ ನದಿ ಎಡ ಮತ್ತು ಬಲ ದಂಡೆಯಲ್ಲಿ ಇರತಕ್ಕಂಥ 400–500 ಹಳ್ಳಿಗಳು ಮತ್ತು ಹತ್ತಾರು ದೊಡ್ಡ ದೊಡ್ಡ ಪಟ್ಟಣಗಳು ಬೇಸಿಗೆಯಲ್ಲಿ ಗಂಭೀರ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವಂತಹ ಸ್ಥಿತಿ ಸುಮಾರು 4–5 ವರ್ಷಗಳಿಂದ ನಡೆದುಕೊಂಡು ಬಂದಂತಹ ಪದ್ಧತಿಯಾಗಿದೆ. ಅದು ಅಲ್ಲದೆ ರೈತರು ತಮ್ಮ ಸರ್ವಸ್ವವನ್ನೇ ಧಾರೆಯೆರೆದು ಅಲ್ಲಿ ಬೆಳೆದಿರತಕ್ಕಂಥ ತಮ್ಮ ಬೆಳೆಯನ್ನೂ ಸಹಿತ ಅವರ ಕಣ್ಣು ಮುಂದೆಯೇ ಒಣಗುವಂತಹ ದಯನೀಯ ಸ್ಥಿತಿಯನ್ನು ಕಂಡು ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ಇದ್ದರೂ ಸಹಿತ ಆ ಕೃಷ್ಣಾ ನದಿಗೆ ಬೇಸಿಗೆಯಲ್ಲಿ ನೀರನ್ನು ಒದಗಿಸುವಂತಹ ವ್ಯವಸ್ಥೆಯನ್ನು ಇಲ್ಲಿಯವರೆಗೆ ಸರ್ಕಾರ ಮಾಡಿಲ್ಲ ತಮಗೆ ಗೊತ್ತಿದ್ದಂತೆ ಫೆಬ್ರವರಿ 3ನೇ ತಾರೀಖು ಒಬ್ಬ ರೈತ ಆ ನೀರಿಗಾಗಿಯೇ ಆ ಹಿಪ್ಪರಗಿ ಬ್ಯಾರೇಜ್‌ನಿಂದ ಕೆಳಗಡೆ ಪಾರಿ ಆತ್ಮಹತ್ಯೆ ಮಾಡಿಕೊಂಡಂತಹ ದಯನೀಯ ಸ್ಥಿತಿ ಇತ್ತು ಆಗ ಇಲ್ಲಿರತಕ್ಕಂಥ ಸರ್ಕಾರ ಎಚ್ಚೆತ್ತು ನಮ್ಮ ಬೆಳಗಾಂ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದಂತಹ ಪ್ರಕಾಶ್ ಹುಕ್ಕೇರಿ ಸಾಹೇಬರು ಆ ಹಿಪ್ಪರಗಿ ಬ್ಯಾರೇಜ್‌ಗೆ ಬಂದು ಆ ಕೃಷ್ಣಾ ನದಿಯ ತೃಷೆಯನ್ನು ನೀಗಿಸುವಂತಹ ಸಲುವಾಗಿ ಹಿಡಕಲ್ ಜಲಾಶಯದಿಂದ 2 ಟಿ.ಎಂ.ಸಿ. ನೀರನ್ನು ಹಿಪ್ಪರಗಿ ಬ್ಯಾರೇಜ್‌ಗೆ

ಬಿಡಬೇಕು ಹಿಪ್ಪರಗಿ ಬ್ಯಾರೇಜ್‌ನಿಂದ ಚಿಕ್ಕಪಡಸಲಗಿ ಬ್ಯಾರೇಜ್‌ಗೆ 2 ಟಿ.ಎಂ.ಸಿ. ನೀರು ಬಿಡಬೇಕು ಎನ್ನುವಂತಹ ಆದೇಶವನ್ನು ಮಾಡಿ ಹೋದರು. ಆದರೆ ಅಲ್ಲಿರತಕ್ಕಂಥ ಸ್ಥಿತಿ ಎಂದರೆ ಆ ಹಿಡಕಲ್ ಜಲಾಶಯದಿಂದ 2 ಟಿ.ಎಂ.ಸಿ. ನೀರನ್ನು ಕೃಷ್ಣಾ ನದಿಗೆ ಬಿಡಬೇಕಾದರೆ ಯಾವುದೇ ಮಾರ್ಗಗಳಿಲ್ಲ ಇಕ್ಕಟ್ಟಾದ ಕಾಲುವೆಯ ಮುಖಾಂತರ ಅಲ್ಲಿರತಕ್ಕಂಥ ಕಾಲುವೆ ಎಸ್ಕೇಪ್‌ಗಳ ಮುಖಾಂತರ ನೀರನ್ನು ಆ ಕೃಷ್ಣಾ ನದಿಯ ಹಿಪ್ಪರಗಿ ಬ್ಯಾರೇಜ್‌ಗೆ ಬಿಡಬೇಕಾಗುತ್ತದೆ. ಹಿಡಕಲ್ ಜಲಾಶಯದಿಂದ ದುಗ್ಗಾಳ್‌ನ ಬಂದಾರಕ್ಕೆ ಬಿಟ್ಟು ಆ ದುಗ್ಗಾಳ್ ಬಂದಾರದಿಂದ 600 ಅಥವಾ 650 ಕ್ಯೂಸೆಕ್ಸ್ ನೀರನ್ನು ದಿನನಿತ್ಯ ಸುಮಾರು 5ನೇ ತಾರೀಖಿನಿಂದ ಇಲ್ಲಿಯವರೆಗೆ ಬಿಡಲಾಗುತ್ತಿದೆ. ಆದರೂ ಸಹಿತ 600 ಕ್ಯೂಸೆಕ್ಸ್ ನೀರಿನಲ್ಲಿ 200 ಕ್ಯೂಸೆಕ್ಸ್ ನೀರು ಮಾತ್ರ ಬಂದು ಸೇರುವಂತಹ ವ್ಯವಸ್ಥೆ ಇದೆ. ಇದಕ್ಕಾಗಿ ದಿನಾಂಕ 14.2.2005ರಂದು ಬೆಳಗಾವಿ ಜಿಲ್ಲಾಧಿಕಾರಿ ಕರೆದಂತಹ ಸಭೆಯಲ್ಲಿ ನಾವು ಪರಿಪರಿಯಾಗಿ ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಕೇಳಿಕೊಂಡೆವು ಆ ಒಂದು ಸಭೆಯಲ್ಲಿ ಮಾನ್ಯ ಮಂತ್ರಿಯವರೂ ಸಹ ಭಾಗವಹಿಸಿದ್ದರು ಅಲ್ಲಿಯ ಲೋಕಸಭಾ ಸದಸ್ಯರ ಜೊತೆಗೆ ನಾಲ್ಕಾರು ವಿಧಾನ ಸಭಾ ಸದಸ್ಯರು ಸಹ ಅದರಲ್ಲಿ ಭಾಗವಹಿಸಿದ್ದೆವು. ಜನಪ್ರತಿನಿಧಿಗಳಾದ ನಾವು ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಅಲ್ಲಿರತಕ್ಕಂಥ ಸಮಸ್ಯೆಗಳನ್ನು ಪರಿಪರಿಯಾಗಿ ಮನವರಿಕೆ ಮಾಡಿಕೊಟ್ಟಿದ್ದೆವು. ಐದಾರು ವರ್ಷಗಳಿಂದ ಅಲ್ಲಿರತಕ್ಕಂಥ ರೈತರು ಅನುಭವಿಸಿಕೊಂಡು ಬಂದಂತಹ ಕಷ್ಟದ ಬಗ್ಗೆ ನಮಗೆ ಅರಿವು ಇದ್ದು, ನಾವು ಅದೇ ನದಿಯ ನೀರಿನಲ್ಲಿ ಬದುಕಿ ಬಾಳಿದ್ದರಿಂದ, ಅಲ್ಲಿ ಸ್ಥಿತಿ ಯಾವ ರೀತಿಯಾಗಿ ನಿರ್ಮಾಣವಾಗುತ್ತಿದೆ ಎಂಬುದರ ಬಗ್ಗೆ ವಿಷಯವನ್ನು ಅವರಿಗೆ ಮನವರಿಕೆ ಮಾಡಿಕೊಟ್ಟೆವು. ನೀವು ಹಿಡಕಲ್ ಜಲಾಶಯದಿಂದ ಪ್ರತಿ ವರ್ಷ 8.10 ಟಿ.ಎಂ.ಸಿ. ನೀರನ್ನು ರಿಸರ್ವ್ ಮಾಡುತ್ತೀರಿ ಇದನ್ನು ಏತಕ್ಕಾಗಿ ಮಾಡುತ್ತೀರಿ ಎಂದರೆ ಕೃಷ್ಣಾ ನದಿಯ ಎಡ ಬದಿಯ ದಂಡೆಯಲ್ಲಿ ಇರತಕ್ಕಂಥ ಜನರಿಗೆ ಕುಡಿಯುವ ನೀರಿನ ಸಲುವಾಗಿ ಘಟಪ್ರಭಾ ಮತ್ತು ಬಾಗಲಕೋಟೆ ಪಟ್ಟಣದ ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ ಅಲ್ಲಿ reserve ಆಗಿ ಇರತಕ್ಕಂಥ ನೀರನ್ನು ಬೇಸಿಗೆಯಲ್ಲಿ ಬಿಡುವಂತಹ ವ್ಯವಸ್ಥೆ ಇದೆ. ಆದರೆ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಕಳೆದ 4-5 ವರ್ಷಗಳಿಂದ ಏಪ್ರಿಲ್-ಮೇ ತಿಂಗಳಿನಲ್ಲಿ ನೀರು ಬಿಡುವಂತಹ ವ್ಯವಸ್ಥೆ ಇರುವುದರಿಂದ ಯಾವುದೇ ಒಂದು ಕ್ಯೂಸೆಕ್ಸ್ ನೀರು ಸಹಿತ ಅಲ್ಲಿ ಇರತಕ್ಕಂಥ ರೈತರಿಗಾಗಲಿ, ಅಲ್ಲಿರತಕ್ಕಂಥ ಮಾಹಾನಗರಗಳಿಗಾಗಲಿ ಬಂದು ತಲುಪುವಂತಹ ವ್ಯವಸ್ಥೆ ಇಲ್ಲ. ಇದರಿಂದ ಹೋದ ವರ್ಷವೇ ಆರು ತಿಂಗಳು ಭಯಾನಕ

ಕುಡಿಯುವ ನೀರಿನ ಸಮಸ್ಯ ನಮ್ಮ ತಾಲ್ಲೂಕಿಗೆ ಒದಗಿದೆ. ನಾನು ಮೊನ್ನೆ ಈ ಮೊದಲು ಪ್ರಸ್ತಾಪ ಮಾಡಿದ ಪ್ರಕಾರ ಯಾವ ರೀತಿ ಗಂಭೀರವಾದ ಕುಡಿಯುವ ನೀರಿನ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಇರುತ್ತದೆ ಎಂದರೆ ನಮ್ಮ 1 ಲಕ್ಷ ಜನಸಂಖ್ಯೆ ಹೊಂದಿರತಕ್ಕಂಥ ಬನಹಟ್ಟಿ ನಗರಸಭೆ ವ್ಯಾಪ್ತಿಯ ಜನತೆ 15 ದಿವಸಕ್ಕೊಮ್ಮೆ ಸ್ನಾನ ಮಾಡುವಂತಹ ದಯನೀಯ ಪರಿಸ್ಥಿತಿ ಒದಗಿತ್ತು ಈ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು ನೀವೇನಾದರೂ ಆ ಹಿಡಕಲ್ ಜಲಾಶಯದಿಂದ **reserve** ಮಾಡಿರತಕ್ಕಂಥ ನೀರು ನಮ್ಮ ತಾಲ್ಲೂಕಿಗೆ ಸದುಪಯೋಗವಾಗ ಬೇಕಾಗಿದ್ದರೆ, ನಮ್ಮ ತಾಲ್ಲೂಕಿನ ಜೊತೆಗೆ ಅಥಣಿ, ರಾಯಭಾಗ್, ಬೀಳಗಿ ತಾಲ್ಲೂಕಿಗೆ ಸದುಪಯೋಗ ಆಗಬೇಕಾಗಿದ್ದರೆ ಈಗ ರೈತರಿಗೆ ಕೊಡುವಂತಹ ನೀರಿನ ಶೇರಿನಲ್ಲಿ ಆ ಕೃಷ್ಣಾ ನದಿಗೂ ಸಹಿತ 500 ಕ್ಯೂಸೆಕ್ಸ್ ನೀರನ್ನು ಬಿಡುವಂತಹ ವ್ಯವಸ್ಥೆಯಾದರೆ ಅಲ್ಲಿ ಆ ನೀರು ಸದುಪಯೋಗವಾಗುತ್ತದೆ ಎನ್ನುವಂತಹ ಮಾತನ್ನು ಅವರಿಗೆ ಹೇಳಿದ್ದೇವೆ. ಈಗ ನಮಗೆ ಅಲ್ಲಿ ಸ್ಟೋರ್ ಮಾಡಿಕೊಳ್ಳುವಂತಹ ವ್ಯವಸ್ಥೆಯೇ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಇಲ್ಲದಿರುವುದರಿಂದ.....

ಅಧ್ಯಕ್ಷರು :- ಸಾವದಿಯವರೇ ನಾನು ನಿಮಗೆ ಮಾತನಾಡಲು ಕೇವಲ ಎರಡು ನಿಮಿಷಗಳ ಕಾಲಾವಕಾಶವನ್ನು ಮಾತ್ರ ಕೊಟ್ಟಿದ್ದೇನೆ. ನೀವು ಈ ರೀತಿ ಮಾತನಾಡುತ್ತಲೇ ಹೋದರೆ ಹೇಗೆ? ನಾನು ಬೇರೆಯವರಿಗೆಲ್ಲಾ ಮಾತನಾಡಲು ಅವಕಾಶ ಕೊಡಬೇಡವೇ?

ಶ್ರೀ ಸಿದ್ದು ಸಾವದಿ :- ಮಾನ್ಯ ಅಧ್ಯಕ್ಷರೆ, ಈ ವಿಷಯವೇ ಬಹಳ ಗಂಭೀರವಾದುದಾಗಿದೆ. ಅದರ ಪರಿಸ್ಥಿತಿ.....

ಶ್ರೀ ಗೋವಿಂದ ಎಂ. ಕಾರಜೋಳ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದು ಇಷ್ಟೇ ಕೃಷ್ಣಾ ನದಿಯ ಬುಡದಲ್ಲಿ ಬರತಕ್ಕಂಥ ಜಮಖಂಡಿ ತಾಲ್ಲೂಕಿನ ಹಳ್ಳಿ ಬೀಳಗಿ ತಾಲ್ಲೂಕಿನ ಹಳ್ಳಿಗಳಿಗೆ ನೀರಿಲ್ಲದೆ ತೊಂದರೆಯಾಗಿದೆ. ಅದಕ್ಕಾಗಿ ಕುಡಿಯುವ ನೀರಿಗಾಗಿ ಬೇಸಿಗೆಯಲ್ಲಿ ಬಿಡಲಿಕ್ಕೆ ಘಟಪ್ರಭಾ ಜಲಾಶಯದಲ್ಲೇನು ನೀರನ್ನು reserve ಮಾಡಿಟ್ಟಿದ್ದಾರೆ, ಆ ನೀರನ್ನು ಬಿಡಿಸಿಕೊಡಬೇಕೆಂದು ಕೇಳುತ್ತಿದ್ದಾರೆ. ದಯವಿಟ್ಟು ಸರ್ಕಾರ ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಸಿದ್ದು ಸಾವದಿ :- .....ಘಟಪ್ರಭಾದಿಂದ ಬಿಡಲಿಕ್ಕೆ ಅಲ್ಲಿ ಅನುಕೂಲತೆಗಳು ಇಲ್ಲ ಅಲ್ಲಿ ಕಾಲುವೆಗಳೇ ಇಲ್ಲ ಅದೆಲ್ಲಾ percolation ಆಗಿ ಭೂಮಿಯೊಳಗೇ ಹೋಗಿ

ಬಿಡುತ್ತದೆ. ರೈತರೆಲ್ಲಾ ಅದನ್ನು ತೆಗೆದುಕೊಂಡು ಬಿಡುತ್ತಾರೆ. ಹಿಡಕಲ್ ಜಲಾಶಯದಿಂದ ನಮ್ಮ ಪಾಲು 4 ಟಿ.ಎಂ.ಸಿ. ನೀರು ಇದೆ. ಅದರಲ್ಲಿ 2 ಟಿ.ಎಂ.ಸಿ. ನಮಗೆ ಬಿಟ್ಟರೆ ಅನುಕೂಲವಾಗುತ್ತದೆ.....

ಶ್ರೀ ಮುರುಗೇಶ್ ಆರ್. ನಿರಾಣಿ :– ಸಾರ್, ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನಾನೂ ಮಾತನಾಡಬಯಸುತ್ತೇನೆ.

ಅಧ್ಯಕ್ಷರು :– ಆಯಿತು, ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಮುರುಗೇಶ್ ಆರ್. ನಿರಾಣಿ (ಬೀಳಗಿ) :– ಮಾನ್ಯ ಅಧ್ಯಕ್ಷರೇ, ನಮ್ಮ ಬೀಳಗಿ ತಾಲ್ಲೂಕಿನಲ್ಲೂ ಸಹಿತ ಕುಡಿಯುವ ನೀರಿನ.....

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಕ್ಕೆ ಮೊದಲು ಉತ್ತರ ಹೇಳಿಬಿಡಲಿ

ಶ್ರೀ ಬಿ. ಸತ್ಯನಾರಾಯಣ :– ಮಾನ್ಯ ಅಧ್ಯಕ್ಷರೇ, ನಾಳೆ ಅದರ ಬಗ್ಗೆ ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಯಾವುದರ ಬಗ್ಗೆ ತಾವು ಉತ್ತರ ಹೇಳುತ್ತೀರಿ ಅವರು ಏನು ಮಾತನಾಡಿದರು ಎಂಬುದನ್ನು ಹೇಳಿ ನೋಡೋಣ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :– ಅವರು ಏನು ಮಾತನಾಡಿದರು ಎಂದು ನಿಮ್ಮಲ್ಲಿ ಯಾರಾದರೂ ಒಬ್ಬರು ಹೇಳಿ ನೋಡೋಣ. ನಾವು ಇಲ್ಲಿ ಆಟವಾಡಲಿಕ್ಕೆ ಬರುತ್ತೇವೆಯೇ? ಅವರು ಯಾವ subject ಬಗ್ಗೆ ಮಾತನಾಡಿದರು ಎಂಬುದನ್ನು ಹೇಳಿ ನೋಡೋಣ.

(ಗೊಂದಲ)

ಅಧ್ಯಕ್ಷರು :– ಅವರು ಗಮನಿಸುತ್ತಿಲ್ಲವೆನಿಸುತ್ತದೆ ಬಿಡಿ. ಮಾನ್ಯ ಸಚಿವರು ದಯವಿಟ್ಟು ನಾನು ಹೇಳುವುದನ್ನು ಕೇಳಿ. ಮಾನ್ಯ ಸಚಿವರುಗಳು ಪರಸ್ಪರ ಮಾತನಾಡಿಕೊಂಡು ಕುಳಿತರೆ, ಅದು ಚೆನ್ನಾಗಿರುವುದಿಲ್ಲ. ಇಲ್ಲೇನಾಗಿದೆ ಎಂದರೆ, ಎಲ್ಲಾ ಸದಸ್ಯರುಗಳೂ ಸರ್ಕಾರದವರು ನಮ್ಮ ಮಾತುಗಳನ್ನೇ ಕೇಳುತ್ತಿಲ್ಲ. ನಮ್ಮ ಸಮಸ್ಯೆಗಳು ಅಷ್ಟೊಂದು ಇವೆ, ನಮಗೆ ಕಷ್ಟ ಇದೆ, ಅದನ್ನು ನಾವು ಗಂಭೀರವಾಗಿ ಪ್ರಸ್ತಾಪ ಮಾಡುತ್ತಿದ್ದೇವೆ. ಅದೇನೋ ಹಳ್ಳಿಯಲ್ಲಿ ಗಾದೆ ಹೇಳುತ್ತಾರಲ್ಲಾ, ಆ ಗಾದೆ ಏನೆಂಬುದನ್ನು ನಾನಿಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆ ತರಹ ಮಾಡುತ್ತಿದ್ದೀರಿ, ಅವರಿಗೆ ಅದರ ಬಗ್ಗೆ ಗಮನವೇ ಇಲ್ಲವೆನ್ನುವಂತಹ ಆಕ್ಷೇಪಣೆಗಳನ್ನು ಮಾಡುತ್ತಿದ್ದಾರೆ. ದಯಮಾಡಿ ಮಾನ್ಯ ಸಚಿವರುಗಳು ವಿರೋಧ ಪಕ್ಷದ ಸದಸ್ಯರಾಗಲಿ ಅಥವಾ ಈ ಕಡೆಯ ಸದಸ್ಯರಾಗಲಿ ವಿಷಯಗಳನ್ನು ಪ್ರಸ್ತಾಪ ಮಾಡುವಾಗ attentive ಆಗಿ ಇರಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಹೇಳಿ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ :– ಅವರು ಕೇಳುವಾಗ ನಾವು ಹೇಳಬೇಕು. ಇದು ತುಂಬಾ ಚೆನ್ನಾಗಿದೆ! ನಾವು ಹೇಳಿದಾಗ ಅವರು ಕೇಳಲಿಲ್ಲ.

ಅಧ್ಯಕ್ಷರು :– ಪ್ರಜಾಪ್ರಭುತ್ವ ಅಂದರೆ ಹಿಂಗೇ ಸ್ವಾಮಿ! ಇದಕ್ಕೆ ಪ್ರಜಾಪ್ರಭುತ್ವ ಅನ್ನುವುದು. ಹೇಳಿ ಸ್ವಾಮಿ.

ವಿಷಯ : ಕುಡಿಯುವ ನೀರಿನ ಸಮಸ್ಯೆ ಕುರಿತು.

ಶ್ರೀ ನಿರ್ಮಾನಿ ಮುರುಗೇಶ್ ರುದ್ರಪ್ಪ (ಬೀಳಗಿ) : ಸನ್ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣ ನದಿ ಮತ್ತು ಘಟಪ್ರಭ ನದಿ ಎರಡೂ ನದಿಗಳು ತುಂಬಿ ಹರಿಯುತ್ತಿದ್ದರೂ ಫೆಬ್ರವರಿಯಿಂದ ಮೇ ತಿಂಗಳವರೆಗೆ ಹೊಳೆ ಪೂರ್ತಿ ಖಾಲಿಯಾಗಿ ದನಕರುಗಳಿಗೆ ಮತ್ತು ಕುಡಿಯುವ ನೀರಿಗೆ ಸಮಸ್ಯೆ ಅತಿ ಹೆಚ್ಚಾಗಿರುವುದರಿಂದ ಹಿಡ್ಕಲ್ ಡ್ಯಾಂನಲ್ಲಿ ಇವತ್ತು 8 ರಿಂದ 10 ಟಿ.ಎಮ್.ಸಿ. ಅಷ್ಟು ನೀರನ್ನು ಕುಡಿಯುವ ನೀರಿಗಾಗಿ ಶೇಖರಣೆ ಮಾಡಿ ಇಟ್ಟಿರುವುದು, ಅದರಲ್ಲಿ ಎರಡು ಟಿ.ಎಮ್.ಸಿ ಅಷ್ಟು ನೀರನ್ನು ಕೃಷ್ಣ ನದಿ ಮೂಲಕವಾಗಿ ಅಥಣಿ ತಾಲ್ಲೂಕು ಮತ್ತು ಜಮಖಂಡಿ ತಾಲ್ಲೂಕಿನ ಮುಖಾಂತರ ಬೀಳಗಿ ತಾಲ್ಲೂಕಿಗೆ ಮುಟ್ಟುವ ತರಹ ನೀರನ್ನು ಬಿಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ತಾವು ಕಡಿಮೆ ನೀರನ್ನು ಪಾಯಿಂಟ್ ಐದು ಟಿ.ಎಮ್.ಸಿ. ಅಥವಾ